


# ಭಾಗ್ಯವಂತರ ಕಾಣುವ ಸೌಭಾಗ್ಯ

ಚಿತ್ರರಂಗದಲ್ಲಿ ಎಷ್ಟೇ ಹೊಸ ನೀರು ಹರಿದರೂ, ಕೆಲವು ಹಳೆಯ ನೆನಪುಗಳು ಮಾಸಿಲ್ಲ, ಮಾಸುವುದೂ ಇಲ್ಲ. ಅದಕ್ಕೆ ರಾಜ್‌ಕುಮಾರ್ ಅವರ ಸಿನಿಮಾಗಳಿಗಿಂತ ಬೇರೆ ಉದಾಹರಣೆ ಬೇಕೆ? ರಂಜನೆ, ಮೌಲ್ಯಗಳು, ಕಲಾತ್ಮಕತೆ, ಜನಪ್ರಿಯತೆ ಎಲ್ಲವನ್ನೂ ಸೇರಿಸಿ ಎರಕಹೊಯ್ದ ಅವರ ನೂರಾರು ಸಿನಿಮಾಗಳು, ಜನಮಾನಸದಲ್ಲಿ ಈಗಲೂ ಅಚ್ಚಳಿಯದೇ ಉಳಿದಿವೆ. ಈಗಲೂ ಅವರನ್ನು ತೆರೆಯ ಮೇಲೆ ನೋಡಲು ಬಯಸುವವರ ಸಂಖ್ಯೆ ದೊಡ್ಡದಿದೆ. ತೆರೆಯ ಮೇಲೆ ನೋಡಲು ಬಯಸುವವರಷ್ಟೇ ಅಲ್ಲ, ತೆರೆಯ ಮೇಲೆ ತರಲು ಬಯಸುವವರೂ ಇದ್ದಾರೆ. ಹಾಗಾಗಿಯೇ ಕಳೆದ ಕೆಲವು ವರ್ಷಗಳಿಂದ ರಾಜ್ ಅವರ ಹಲವು ಹಳೆಯ ಸಿನಿಮಾಗಳು ಹೊಸ ಅಂಗಿ ತೊಟ್ಟು ತೆರೆಯ ಮೇಲೆ ಮರುಬಿಡುಗಡೆಯಾಗುತ್ತಿದೆ. ಆ ಸಾಲಿಗೆ ಈಗ ಹೊಸ ಸೇರ್ಪಡೆ 'ಭಾಗ್ಯವಂತರು'. ಭಾರ್ಗವ ನಿರ್ದೇಶನದ, ರಾಜ್‌ಕುಮಾರ್, ಸರೋಜಾದೇವಿ, ಬಾಲಕೃಷ್ಣ, ಅಶ್ವತ್ಥ್, ತೂಗುದೀಪ ಶ್ರೀನಿವಾಸ್ ಅವರಂಥ ಮೇರುಪ್ರತಿಭೆಗಳು ನಟಿಸಿರುವ ಈ ಸಿನಿಮಾ 1977ರಲ್ಲಿ ಬಿಡುಗಡೆಯಾಗಿತ್ತು. ಈಗ ನಲ್ವತ್ತೈದು ವರ್ಷಗಳ ನಂತರ ಮುನಿರಾಜು ಅವರು 'ಭಾಗ್ಯವಂತರು' ಸಿನಿಮಾಗೆ 7.1 ಡಿಜಿಟಲ್ ಸೌಂಡ್, ಕಲರಿಂಗ್, ಡಿಟಿಎಸ್ ಮುಂತಾದ ಆಧುನಿಕ ತಂತ್ರಜ್ಞಾನಗಳನ್ನು ಲೇಪಿಸಿ ಮರುಬಿಡುಗಡೆ ಮಾಡುತ್ತಿದ್ದಾರೆ. ಜುಲೈ 8ರಂದು ಈ ಸಿನಿಮಾ ರಾಜ್ಯದಾದ್ಯಂತ 50ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಪ್ರದರ್ಶನ ಕಾಣಲಿದೆ.

ರಾಜ್ ಅವರನ್ನು, ಅವರ ಅಭಿನಯದ ಸೊಗವನ್ನು ಹಿರಿತೆರೆಯ ಮೇಲೆ ಸವಿಯಬಯಸುವವರಿಗೆ ಇದು ಭಾಗ್ಯವಲ್ಲದೆ ಇನ್ನೇನು? ■

# 'ಭೀಮ'ದಲ್ಲಿ ಪ್ರಿಯಾ

ದುನಿಯಾ ವಿಜಯ್ ನಿರ್ದೇಶನದ 'ಸಲಗ' ಸಿನಿಮಾ ಬಾಕ್ಸ್ ಆಫೀಸಿನಲ್ಲಿ ಲಾಭ ತಂದುಕೊಟ್ಟ ಮೇಲೆ ಅವರು ನಿರ್ದೇಶನದ ಯಾತ್ರೆಯನ್ನು ಇನ್ನಷ್ಟು ವಿಶ್ವಾಸದಿಂದ ಮುಂದುವರಿಸಿದ್ದಾರೆ. ಅವರ ನಿರ್ದೇಶನದ 'ಭೀಮ' ಸಿನಿಮಾ ಕೆಲದಿನಗಳ ಹಿಂದೆ ಅದ್ದೂರಿಯಾಗಿ ಸೆಟ್ಟೇರಿತ್ತು.

ಹೊಸ ಪ್ರತಿಭೆಗಳನ್ನು, ಅದರಲ್ಲಿಯೂ ರಂಗಭೂಮಿ ಹಿನ್ನೆಲೆಯುಳ್ಳ ಪ್ರತಿಭಾವಂತ ನಟರನ್ನು ಅವರು 'ಸಲಗ' ಸಿನಿಮಾದಲ್ಲಿಯೇ ಪರಿಚಯಿಸಿದ್ದರು. ಹೊಸಬರಿಗೆ ಅವಕಾಶ ಕೊಡುವ ಆ ಕೆಲಸವನ್ನು 'ಭೀಮ' ಸಿನಿಮಾದಲ್ಲಿಯೂ ಮುಂದುವರಿಸಿದ್ದಾರೆ. ಈ ಬಾರಿ ಅವರ ಕಣ್ಣಿಗೆ ಬಿದ್ದವರು ಮೈಸೂರಿನ ಪ್ರಿಯಾ ಶತಮರ್ಷನ್. 'ನಟನ' ರಂಗತಂಡದಲ್ಲಿ ಅಭಿನಯ ತರಬೇತಿ ಪಡೆದಿರುವ ಪ್ರಿಯಾ ಹಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಈಗ ಪೊಲೀಸ್ ಪಾತ್ರದ ಮೂಲಕ ಹಿರಿತೆರೆಯಲ್ಲಿ ಕಾಣಿಸಿಕೊಳ್ಳಲು ಸಜ್ಜಾಗಿದ್ದಾರೆ.

'ಸಲಗ' ಸಿನಿಮಾದಲ್ಲಿ ಪೊಲೀಸ್ ಮತ್ತು ನಾಯಕನ ನಡುವಿನ ಜಿದ್ದಾಜಿದ್ದಿಯನ್ನೇ ಇಟ್ಟುಕೊಳ್ಳಲಾಗಿತ್ತು. 'ಭೀಮ' ಸಿನಿಮಾದಲ್ಲಿಯೂ ಆ ಎಳೆ ಇರುವ ಸುಳಿವು ಸಿಗುತ್ತಿದೆ. ಪೊಲೀಸರನ್ನು ಹತ್ತಿರದಿಂದ ನೋಡಿದ, ಜೈಲಿನಲ್ಲಿಯೂ ಕೆಲಕಾಲ ಇದ್ದುಬಂದ ಅನುಭವ ವಿಜಯ್ ಅವರ ಮೇಲೆ ಗಾಢವಾಗಿ ಪ್ರಭಾವ ಬೀರಿರುವುದನ್ನು ಅವರೇ ಹೇಳಿಕೊಂಡಿದ್ದರು. ಆ ಪ್ರಭಾವ ಈಗ 'ಭೀಮ'ನ ಮೇಲೆಯೂ ಇರುವಂತಿದೆ. ಆ ಪ್ರಭಾವ ಏನೇ ಇದ್ದರೂ ಜನಪ್ರಿಯ ನಟನೊಬ್ಬ ತಮ್ಮ ಸಿನಿಮಾಗಳಲ್ಲಿ ಹೊಸ ಪ್ರತಿಭೆಗಳನ್ನು ಹುಡುಕಿ ಪರಿಚಯಿಸುತ್ತಿರುವುದು ಕನ್ನಡ ಚಿತ್ರರಂಗಕ್ಕೂ ಆರೋಗ್ಯಕರ ಬೆಳವಣಿಗೆಯೇ ಆಗಿದೆ. ■

